ಕರ್ನಾಟಕ ಸರ್ಕಾರ

ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿ.ಇ/157/2020/ಎ.ಆರ್.ಇ-7

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 25ನೇ ಜುಲೈ 2023.

-:: ಶಿಫಾರಸ್ಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಪಿ. ಶಶಿಧರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಸಇ 330 ಎಸಸೇ 2018, ಬೆಂಗಳೂರು, ದಿನಾಂಕ: 14/08/2020.

(2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್-2/ಡಿಇ/ 157/2020, ಬೆಂಗಳೂರು, ದಿನಾಂಕ: 20/08/2020.

(3) ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 21/07/2023.

*****

ಸರ್ಕಾರದ ಆದೇಶ ದಿನಾಂಕ: 14/08/2020 ರಂತೆ ಶ್ರೀ ಪಿ. ಶಶಿಧರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಬೋಧಿಸಲಾಗುವುದು) ರವರ ವಿರುದ್ಧ ಶಿಸ್ತು

31



ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/175/2020, ಬೆಂಗಳೂರು, ದಿನಾಂಕ: 20/08/2020ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಪಿ. ಶಶಿಧರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

*ಅನುಬಂಧ-1*

***:: ದೋಷಾರೋಪಣೆ ::***

ನೀವು, ಆ.ಸ.ನೌಕರರಾದ ಶ್ರೀ ಪಿ.ಶಶಿಧರ್, ಸಹಕಾರ ಸಂಘಗಳ ಉಪ ನಿಬಂಧಕರಾಗಿ 03/03/2014 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ತಮ್ಮ ಈ ಸಮಯದಲ್ಲಿ ಅಧಿಕಾರದ ದುರುಪಯೋಗ ಮತ್ತು ಕರ್ತವ್ಯ ಲೋಪ ಎಸಗಿರುವುದು ಈ ಕೆಳಗಿನಂತೆ ಕಂಡುಬಂದಿರುತ್ತದೆ.

*ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್, ಮೈಸೂರು ಇದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇವರ ಸಂಬಂಧಿಗಳಿಗೆ ದೊಡ್ಡ ಮೊತ್ತದ ಸಾಲವನ್ನ ನೀಡಿ ಹಣವನ್ನ ದುರುಪಯೋಗ ಪಡಿಸಿರುತ್ತಾರೆಂದು ಬಂದ ದೂರಿನ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಿಮಗೆ ಸೂಚಿಸಿದ್ದು, ನೀವು ಮಾರಾಟಾಧಿಕಾರಿ ಸರ್ಕಾರ ಸಹಕಾರ ಸಂಘಗಳ ನಿಬಂಧಕರ ಕಛೇರಿ ಇವರಿಂದ ವಿಚಾರಣೆ ನಡೆಸಿ, ಈ ಸಂಸ್ಥೆಗೆ ಸಲ್ಲಿಸಿದ ದಿ:15/06/15ರ ವಿಚಾರಣಾ ವರದಿಯಲ್ಲಿ, ಆಪಾದನೆಗಳ ಬಗ್ಗೆ ಸಮರ್ಪಕ ತನಿಖೆಯನ್ನು ನಡೆಸದೇ, ದೂರುದಾರರು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲವೆಂಬ ಅಂಶವನ್ನು ಮುಂದಿಟ್ಟುಕೊಂಡು "ಸಂಬಂಧಿಗಳಿಗೆ ಸಾಲ ನೀಡಿರುವ ಆರೋಪವು ಸಾಬೀತಾಗಿಲ್ಲ" ಎಂದು ವರದಿಯನ್ನು ಸಲ್ಲಿಸಿರುತ್ತೀರಿ.*

*ಮುಸ್ಲಿಂ ಕೋ-ಆಪರೇಟೀವ್ ಬ್ಯಾಂಕ್, ಮೈಸೂರು ಸಂಸ್ಥೆಯು ನಿರ್ದೇಶಕರುಗಳ ಸಂಬಂಧಿಗಳಿಗೆ ಸಾಲ ನೀಡಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆ ಸಂಖ್ಯೆ:ಬಿಪಿಡಿ. ಸಿಐಆರ್.50/13.05.00/2002-03*

ದಿನಾಂಕ:29/04/2003 ಮತ್ತು ಸುತ್ತೋಲೆ ಸಂಖ್ಯೆ:ಬಿಪಿಡಿ.ಸಿಪಿಆರ್.54/13.05.00/2002-03 ದಿನಾಂಕ:24/06/2003 ಹಾಗೂ ನಿರ್ದೇಶನ ಸಂಖ್ಯೆ:ಬಿಪಿಡಿ.ಡಿಪಿಆರ್.5/ 13.05.00/2002-03 ದಿನಾಂಕ:29/04/2003ರಲ್ಲಿ ನಿಷೇಧಿಸಿದೆ. ಈ ಸುತ್ತೋಲೆಗಳನ್ನು ಮತ್ತು ನಿರ್ದೇಶನಗಳನ್ನು ಉಲ್ಲಂಘಿಸಿದ್ದರಿಂದ, ಸದರಿ ಬ್ಯಾಂಕ್‌ಗೆ ಒಂದು ಲಕ್ಷ ರೂಪಾಯಿಯ ದಂಡ ವಿಧಿಸಿದೆ. ಅದರಂತೆ, ಸದರಿ ಬ್ಯಾಂಕ್ 2015-16ನೇ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ರೂಪಾಯಿ ಒಂದು ಲಕ್ಷ ದಂಡವನ್ನು ಪಾವತಿಸಿರುವುದು ಬ್ಯಾಂಕ್‌ನ ಲಾಭ-ನಷ್ಟದ ತಃಖ್ತೆಯಲ್ಲಿ ಕಂಡು ಬಂದಿದೆ.

ಮುಂದುವರೆದು, ಮುಸ್ಲಿಂ ಮಹದೇವಿಯ ಚಾರಿಟೆಬಲ್ ಟ್ರಸ್ಟ್, ಮೈಸೂರು ರವರಿಗೆ ದಿ:02/11/10ರಂದು ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್, ಮೈಸೂರು ನಿಂದ ರೂ.40 ಲಕ್ಷ ಬೈಲಾದಲ್ಲಿ ಅವಕಾಶ ಇಲ್ಲದೇ ಇದ್ದರೂ ಸಾಲ ನೀಡಿದ್ದು, ಟ್ರಸ್ಟ್‌ನ ಸ್ಥಿರ ಸ್ವತ್ತನ್ನು ಬ್ಯಾಂಕ್‌ಗೆ ಒತ್ತೆಯಿಟ್ಟುಕೊಂಡು ಸದರಿ ಸಾಲವನ್ನು ನೀಡಿರುವುದು ಕಂಡು ಬಂದಿದೆ.

ಈ ರೀತಿಯಾಗಿ ಆ.ಸ.ನೌಕರರು ಕರ್ತವ್ಯದಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ತೋರದೇ ಅಧಿಕಾರ ದುರುಪಯೋಗ ಮತ್ತು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು-7), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ ಪಿ. ಶಶಿಧರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ-1ನ್ನು ವಿಚಾರಣೆಗೆ

33



ಒಳಪಡಿಸಿ ಹಾಗೂ ನಿಶಾನೆ ಪಿ-1 ರಿಂದ ಪಿ-3 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆ.ಸ.ನೌಕರರು ಸ್ವತ: ತಾವೇ ಡಿ.ಡಬ್ಲ್ಯೂ-1 ಎಂಬ ಸಾಕ್ಷಿಯಾಗಿ ವಿಚಾರಣೆ ಮಾಡಿಕೊಂಡು, ನಿಶಾನೆ ಡಿ-1 ರಿಂದ ಡಿ-6 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ ಪಿ. ಶಶಿಧರ್, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ '**ದೋಷಮುಕ್ತಗೊಳಿಸಲು**' ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

25/7/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.